# ವಿದ್ಯೆಯ ಕತ್ತಲು

**ಡಾ. ಹೆಚ್. ಪಾಂಡುರಂಗ ವಿಠಲ**

ಮೇಲ್ನೋಟಕ್ಕೆ ವಿರುದ್ಧವೆನಿಸುವ ಭಾವನೆಯನ್ನು ಜ್ಞಾನಮೀಮಾಂಸೆಯಲ್ಲಿ ಕಾಣುತ್ತೇವೆ. ಜ್ಞಾನಪ್ರಕ್ರಿಯೆಯು ಒಂದು ಹಂತವನ್ನು ದಾಟಿದ ನಂತರ, ಅದು ಅಜ್ಞಾತ ವಲಯದ ಮೂಲಕ ಹಾದುಹೋಗಬೇಕಾಗುತ್ತದೆ. ಇದನ್ನು ಒಂದು ಬಗೆಯ ಕತ್ತಲು ಎನ್ನಬಹುದು. ಅನುಭಾವದ ಈ ಸ್ತರವನ್ನು ಕುರಿತ ಚಿಂತನೆ ಇಲ್ಲಿದೆ. ಈ ಕುರಿತು ಬರೆದಿರುವ ಲೇಖಕರು ಮೈಸೂರಿನಲ್ಲಿ ಕನ್ನಡ ಉಪನ್ಯಾಸಕರಾಗಿದ್ದಾರೆ. ಒಳ್ಳೆಯ ಚಿಂತಕರೂ, ಬರಹಗಾರರೂ ಆಗಿರುವ ಇವರ ಅನೇಕ ಬರಹಗಳು ಈ ಪತ್ರಿಕೆಯಲ್ಲಿ ಪ್ರಕಟವಾಗಿವೆ.


**ಅಂಧಂತಮಃ ಪ್ರವಿಶಂತಿ ಯೇಽವಿದ್ಯಾಮುಪಾಸತೇ**
**ತತೋ ಭೂಯ ಇವ ತೇ ತಮೋಯ ಉ ವಿದ್ಯಾಯಾಂ ರತಾಃ ॥**

(ಯಾರು ಅವಿದ್ಯೆಯನ್ನು ಉಪಾಸನೆ ಮಾಡುತ್ತಾರೋ ಅವರು ಕುರುಡುಗತ್ತಲೆಯನ್ನು ಪ್ರವೇಶಿಸುವರು, ಮತ್ತು ಯಾರು ವಿದ್ಯೆಯಲ್ಲಿ ನಿರತರಾಗಿರುವರೋ ಅವರು ಅದಕ್ಕಿಂತ ಹೆಚ್ಚಿನ ಕತ್ತಲೆಯನ್ನು ಪ್ರವೇಶಿಸುವರು. ವಿದ್ಯೆ-ಅವಿದ್ಯೆಗಳ ಬದಲು ಸಂಭೂತಿ-ಅಸಂಭೂತಿ ಎಂಬ ಪದಗಳನ್ನು ಉಪಯೋಗಿಸಿದ ಮಂತ್ರವೂ ಇಲ್ಲಿ ಇದೆ.)

ಈಶೋಪನಿಷತ್ತಿನ ಈ ಒಂಬತ್ತನೆಯ ಮಂತ್ರದ ಅರ್ಥವು ವಿವಿಧ ವ್ಯಾಖ್ಯಾನಗಳಿಗೆ ಒಳಗಾಗಿದೆ. ಶಂಕರರ ಪ್ರಕಾರ ಇಲ್ಲಿ ವಿದ್ಯೆಯೆಂದರೆ ದೇವತಾಜ್ಞಾನ, ಅವಿದ್ಯೆ ಎಂದರೆ ಕರ್ಮ ಎಂದು ವ್ಯಾಖ್ಯಾನಿಸಿ, ಉಪಾಸನೆ-ಕರ್ಮಸಮುಚ್ಚಯ ಹೆಚ್ಚು ಪರಿಣಾಮಕಾರಿ ಎಂದು ಹೇಳಿದೆ. ಕತ್ತಲೆ-ಹೆಚ್ಚು ಕತ್ತಲೆಯನ್ನು ಪ್ರವೇಶಿಸುತ್ತಿರುವವರು ಯಾರು ಎಂಬುದಕ್ಕೆ ಅವರು ಒತ್ತುಕೊಡುವರೇ ವಿನಾ ಕತ್ತಲೆಯ ಸ್ವರೂಪದ ಬಗ್ಗೆ ತಿಳಿಸುವುದಿಲ್ಲ. ಭೂಯ ಇವ ಎಂದರೆ ಹೆಚ್ಚಾಗಿರುವಂತೆ ಇರುವ, ಕತ್ತಲಿನ ಭಾಸ. ವಿದ್ಯೆ-ಕರ್ಮ ಬೇರೆ, ಅವುಗಳ ಫಲಗಳೂ ಬೇರೆ (**ಕರ್ಮಣಾ ಪಿತೃಲೋಕಃ ವಿದ್ಯಯಾ ದೇವಲೋಕಃ** –*ಬೃ.ಉ.೧.೫.೬.)* ಕರ್ಮದ ಅನಂತರ ಉಪಾಸನೆಗೆ ಅಧಿಕಾರ, ನೇರ ಉಪಾಸನೆಗೆ ಇಳಿಯಬಾರದು, ಇಳಿದರೆ ಕತ್ತಲು. ಎರಡರ ಸಮುಚ್ಚಯ ಆವಶ್ಯಕ.

ಭಕ್ತಿಪಂಥದವರನ್ನು ಪ್ರತಿನಿಧಿಸುವ ವೇದಾಂತದೇಶಿಕರು 'ವಿಷ್ಣುಪುರಾಣ'ದಲ್ಲಿ ಹೇಳಿದಂತೆ ಅವಿದ್ಯೆಯನ್ನು ಜ್ಞಾನರಹಿತ ಕರ್ಮವೆಂದೂ, ವಿದ್ಯೆಯು ಜ್ಞಾನವೆಂದೂ ತಿಳಿಸುತ್ತಾರೆ. ಅವರ ಪ್ರಕಾರ ಇಲ್ಲಿರುವುದು ವರ್ಣಾಶ್ರಮಧರ್ಮಾನುಗೃಹೀತವಾದ ಜ್ಞಾನ-ಕರ್ಮ ಸಮುಚ್ಚಯ.

ಅತಿ ಗಾಢವಾದ ಅಜ್ಞಾನವೇ ಅಂಧಂತಮಸ್ಸು. **ಭೂಯ ಇವ ತಮ** ಅಥವಾ ಹೆಚ್ಚಾಗಿ ಇರುವಂತೆ ಇರುವ ಕತ್ತಲೆಯ ಸ್ವರೂಪ ಏನು? ಬಹುಶಃ ಇದು ಕತ್ತಲಿನ ಭಾಸ. ಶಂಕರರ ಕಾಲದಲ್ಲಿ ಪ್ರಚಲಿತವಿದ್ದ ಉವಟಾರ್ಯ ಮೊದಲಾದವರ ವ್ಯಾಖ್ಯಾನಗಳಲ್ಲಿ ಈ ಮಂತ್ರವು ಕ್ರಮಮುಕ್ತಿಯ ಮಾರ್ಗವಾಗಿ ಜ್ಞಾನ-ಕರ್ಮ ಸಮುಚ್ಚಯವನ್ನು ಹೇಳುತ್ತದೆ. ಶಂಕರರು ತಮ್ಮ ಭಾಷ್ಯದಲ್ಲಿ ಈ ಜ್ಞಾನ-ಕರ್ಮ ಸಮುಚ್ಚಯವನ್ನು ಖಂಡಿಸಿ, ಕರ್ಮ-ಉಪಾಸನೆಗಳ ಸಮುಚ್ಚಯವನ್ನು ಗುರುತಿಸುತ್ತಾರೆ. ಇದಕ್ಕಾಗಿಯೆ **ಭೂಯ ಇವ** ಎನ್ನುವುದನ್ನು 'ಬಹುತರಮೇವ' ಎಂಬಂತೆ ಅರ್ಥೈಸುತ್ತಾರೆ. ಉಳಿದವರೂ 'ಇವ' ಅನ್ನು ಹೀಗೆಯೇ ಕಣ್ಮುಚ್ಚಿ ಅರ್ಥಮಾಡುತ್ತಾರೆ.



ಆಧುನಿಕರಲ್ಲಿ ಕೂಡ ಈ ಮಂತ್ರ ಜಿಜ್ಞಾಸೆಗೆ ಕಾರಣವಾಗಿದೆ. ಆದರೆ ಕತ್ತಲೆಯ ಸ್ವರೂಪ ಅವಜ್ಞೆಗೆ ಒಳಗಾಗಿಯೆ ಇದೆ. ಡಾ. ಕೆ.ಬಿ. ರಾಮಕೃಷ್ಣರಾಯರು ಅವಿದ್ಯೆ-ವಿದ್ಯೆಗಳನ್ನು ವಿವರಿಸುವ ರೀತಿ ವಿಶಿಷ್ಟವಾಗಿದೆ:

ವ್ಯಕ್ತಿಯು ಅಸ್ತಿತ್ವ ಹಾಗೂ ಮೌಲ್ಯಗಳಲ್ಲಿ ತಾನೇ ಮೊದಲು ಹಾಗೂ ಕೊನೆ ಎಂದು ತಿಳಿಯುವ ಆತ್ಯಂತಿಕ ನಿರಾಕರಣ (Absolute exclusion) ಅವಿದ್ಯೆ. ಈ ನಿರಾಕರಣ ಮೂರು ರೀತಿಯದ್ದು:

(ಅ) ಸಹಜೀವಿಗಳನ್ನು ಹೊರತುಪಡಿಸುವುದು

(ಆ) ವಾಸ್ತವಿಕ ಅಜೀವ ವಸ್ತುಗಳನ್ನು ಹೊರತುಪಡಿಸುವುದು

(ಇ) ಎಲ್ಲ ಬಗೆಯ ಅಸ್ತಿತ್ವದ ನಡುವಣ ಬಂಧವಾದ ದೈವವನ್ನು ಹೊರತುಪಡಿಸುವುದು.

ಈ ವಿವರಣೆ ಬೌದ್ಧ ವಿಜ್ಞಾನವಾದವನ್ನು ಹೋಲುತ್ತದೆ. (ಇದರ ಕೊನೆ ತೀವ್ರತರವಾದ ಮಾನಸಿಕ ಏಕಾಂತವಾದ – Solipsim) ಇದೊಂದು ಅಭಾವಾತ್ಮಕ ಅಜ್ಞಾನ. ಜೀವ-ಜೀವನದ ಜೊತೆ ಮೇಳವಿಲ್ಲದ ಒಂದು ಬಗೆಯ ಪರಿಮಿತಿ. ಅದು ಜೀವವನ್ನು ನಿರಾಕರಿಸುವ ಸಾವು, ಬೆಳಕನ್ನು ನಿರಾಕರಿಸುವ ಕತ್ತಲು.

ರಾಯರ ಪ್ರಕಾರ ವಿದ್ಯೆಯು ಭಾವಾತ್ಮಕ ಅಜ್ಞಾನ: ಒಂದು ಬಗೆಯ ಸಾಪೇಕ್ಷ ಆಕರಣ (Relative Inclusion) ವ್ಯಕ್ತಿಯು ತನ್ನ ಆತ್ಮವನ್ನು (ಅ) ಸಹಜೀವಿಗಳು

(ಆ) ಅನುಭವ ಪ್ರಪಂಚದ ಸಜೀವ-ನಿರ್ಜೀವ ವಸ್ತುಗಳು

(ಇ) ವಾಸ್ತವಿಕ ಅಸ್ತಿತ್ವ

(ಈ) ಇಂದ್ರಿಯಾತೀತ ದೈವ

ಇವುಗಳಲ್ಲಿ ಯಾವುದಾದರೂ ಮೂರನ್ನು ನಿರಾಕರಿಸಿ ಉಳಿದ ಒಂದರ ಜೊತೆ ಅದ್ವಿತೀಯ ಸಂಬಂಧ ಹೊಂದಿರುವಂತೆ ಸಮೀಕರಿಸಿಕೊಳ್ಳುತ್ತಾನೆ. ಇದು ಮರ್ತ್ಯ ಅಮೃತವಾಗಲು, ಕತ್ತಲು ಪ್ರಕಾಶಿಸಲು ಪ್ರಯತ್ನಿಸಿದಂತೆ. ಇಂತಹ ವಿದ್ಯೆ ಸ್ವಾಭಾವಿಕವಾಗಿ ಭಾವಾತ್ಮಕವಾದರೂ, ತನಗೇ ತಿಳಿದೋ ತಿಳಿಯದೆಯೋ ವ್ಯಕ್ತಿಯು ಅನಂತ ಅಸ್ತಿತ್ವದ ಬಹು ಆಯಾಮಗಳ ರಚನೆಯ ಜೊತೆ ಹೊಂದಿರುವ ಸಂಬಂಧವನ್ನು ಮರೆಸುತ್ತದೆ; ಹಾಗಾಗಿ ಈ ಪ್ರಜ್ಞೆ ತುಂಬಾ ಸೀಮಿತ. ಈ ವಿದ್ಯೆಯು ಸತ್ಯ ಧರ್ಮ ಎಂದು ವರ್ಣಿಸಲ್ಪಡುವ ನಿಜವಾದ 'ವಿದ್ಯೆ'ಯಲ್ಲ. ತಂತಮ್ಮ ಕೂಪದೊಳಗೇ ಇದ್ದು, ಹೊರಗಣ ವಿಶಾಲ ಚಲನಶೀಲ ಜೀವನದ ಜೊತೆ ಸ್ಪಂದಿಸಲು ನಿರಾಕರಿಸುವ ಅಥವಾ ತಮ್ಮ ಸ್ವಂತ ಮುಕ್ತಿಯನ್ನು ಇತರರ ಜೊತೆ ಹಂಚಿಕೊಳ್ಳಬಯಸದ ಶ್ರದ್ಧಾಳುಗಳಿಗೆ ಹೆಚ್ಚಿನ ಕತ್ತಲೆಯೇ ಕಾದಿದೆ.

ಈ ಹಿನ್ನೆಲೆಯಲ್ಲಿ ಕತ್ತಲೆಯ ಸ್ವರೂಪದ ಬಗ್ಗೆ ಬೆಳಕು ಬೀರಿದ್ದಾರೆ ಸ್ವಾಮಿ ಭಜನಾನಂದರು. ಹೆಚ್ಚಾಗಿರುವಂತೆ ಇರುವ ಈ ಕತ್ತಲು ಕ್ರೂಜೆಯ ಸಂತ ಜಾನ್ ಹೇಳುವ 'Dark night of the soul' ಎನ್ನುವುದು ಅವರ ಅನಿಸಿಕೆ. ಕ್ರಿಶ್ಚಿಯನ್ ಅಧ್ಯಾತ್ಮದಲ್ಲಿ ಬರುವ ಈ ಘಟ್ಟವು ಭಾರತೀಯ ಅನುಭಾವ ಸಾಹಿತ್ಯದಲ್ಲಿ ಕಾಣಬರುವುದು ತೀರ ವಿರಳ.

ಸಾಮಾನ್ಯವಾಗಿ ಪ್ರಜ್ಞೆಯು ತನ್ನ ಹಿಡಿತಕ್ಕೆ ಸಿಕ್ಕದ, ದುರ್ಬಲ ಹಾಗೂ ಅವೈಯಕ್ತಿಕವಾದ ಒಂದು ತತ್ತ್ವ, ಅದನ್ನು ಪ್ರಾಯೋಗಿಕ ಕೆಲಸಗಳಿಗೆ ಹಚ್ಚಲು ಬಾರದೆಂದು ಸಾಧಕ ತಿಳಿಯುತ್ತಾನೆ. ಹೀಗಾಗಿ, ತನ್ನ ಸ್ವಂತ ಪ್ರಜ್ಞೆಯನ್ನು ಅವಲಂಬಿಸುವುದರ ಬದಲು ಕೆಲವು ಪ್ರತಿಮೆಗಳು ಹಾಗೂ ಆಗಲೇ ಖಚಿತಗೊಳಿಸಿಕೊಂಡ ರಚನೆಗಳನ್ನು ಧ್ಯಾನದ ಸಮಯದಲ್ಲಿ ಹಿಡಿದುಕೊಳ್ಳುತ್ತಾನೆ. ಸಾಧನೆಯಲ್ಲಿ ಮುಂದುವರಿದಂತೆಲ್ಲ ಇದೇ ಒಂದು ಅಡ್ಡಿಯಾಗುತ್ತದೆ. ಉನ್ನತ ಆಧ್ಯಾತ್ಮಿಕ ಪ್ರಜ್ಞಾಪ್ರವಾಹದಲ್ಲಿ ಸೆಳೆಯಲ್ಪಟ್ಟಾಗ ಹೊರಗಣ ಪ್ರಪಂಚದಲ್ಲಿನ ಕಾಯಕ ಹಾಗೂ ಧ್ಯಾನವನ್ನು ನಿರ್ವಹಿಸಲು ಅಸಾಧ್ಯವಾಗುತ್ತದೆ. ಆಗ ಪ್ರತಿಮೆಗಳು, ಕಲ್ಪನೆಗಳನ್ನು ಬಿಡಲು ಅವನೊಳಗಿನ ಆತ್ಮದಿಂದಲೇ ಶಕ್ತಿ ಬರಬೇಕು. (**'ಆತ್ಮನಾ ವಿಂದತೇ ವೀರ್ಯಂ'** *ಕೇನ ಉ. ೨.೪).* ಏಕೆಂದರೆ ಆಗ ಅವನಿಗೆ ಆಧಾರವೇ ಇಲ್ಲದೆ ಅತ್ಯಂತ ಏಕಾಕಿತನದ ಕತ್ತಲಿನ ಅನುಭವವಾಗುತ್ತದೆ.

ಯೋಗ ಮತ್ತು ವೇದಾಂತವನ್ನು ಅನುಸರಿಸುವ ಸಾಧಕರು ಮಾನಸಿಕವಾದ ಎಲ್ಲ ಆಧಾರಗಳನ್ನು ಬಿಟ್ಟಾಗಲೂ, ಯಾವಾಗಲೂ ತಮ್ಮೊಳಗಿನ ಆತ್ಮನ ಬಗೆಗೆ ಅತ್ಯಂತ ಶ್ರದ್ಧೆಯನ್ನು ಹೊಂದಿರುವುದರಿಂದ, ಈ ಘಟ್ಟವನ್ನು ಸುಲಭವಾಗಿ ದಾಟುತ್ತಾರೆ. ಹೀಗಾಗಿ ನಮ್ಮ ಆಧ್ಯಾತ್ಮಿಕ ಪರಂಪರೆಯಲ್ಲಿ 'Dark night of the soul' ನ ಸುಳಿವಿಲ್ಲ.

ಸ್ವಾಮಿ ಅಚಲಾನಂದರು ಈ ಸಾಂಪ್ರದಾಯಿಕ ಸಮುಚ್ಚಯವಾದಗಳನ್ನು ಬದಿಗಿಟ್ಟು, ಕತ್ತಲೆಯ ಸ್ವರೂಪದ ಬಗ್ಗೆ ವಿವರಿಸುತ್ತಾರೆ. ವಿದ್ಯೆ ಅಥವಾ ಅರಿವಿನ ಸ್ಥಿತಿಯು ಎರಡನೆಯದು ಇಲ್ಲದ ಅತ್ಯುನ್ನತ ಸ್ಥಿತಿ, ಅರಿವಿನ ವಸ್ತು ಇಲ್ಲದ ಅರಿವು, ಅದ್ವೈತಾನುಭೂತಿ. ಜ್ಞೇಯ ವಸ್ತು ಇರುವ ಜ್ಞಾನ ಅಥವಾ ಎರಡನೆಯದು ಇರುವ ಸ್ಥಿತಿಯು ಅ-ಜ್ಞಾನವೇ; ಅದು ಅವಿದ್ಯೆ. ಈ ಅರ್ಥದಲ್ಲಿ ತಾರ್ಕಿಕ ಜ್ಞಾನವು ಮನಸ್ಸಿನ ಒಂದು ವಸ್ತು, ಅತಿ ಆಪ್ತವಾದ ಅದ್ವೈತಾನುಭವವಲ್ಲ, ಆದ್ದರಿಂದ ಅವಿದ್ಯೆ.

ಹಾಗಾದರೆ, ಇನ್ನೊಂದರ ಜ್ಞಾನವಲ್ಲದ ಅಸಂದಿಗ್ಧವಾದ ಅದ್ವೈತಾನುಭವದ ಸ್ಥಿತಿ ಅಥವಾ ವಿದ್ಯೆಯನ್ನು ಅರಿತವರ ಪಾಡು ಏನು? ಅವಿದ್ಯೆಯ ಸ್ಥಿತಿಯಲ್ಲಿ ವಿಚಾರವೇ 'ಇನ್ನೊಂದು' ಆಗಿತ್ತು, ಕಣ್ಣು ಕತ್ತಲೆಯನ್ನು ಗುರುತಿಸುತ್ತಿತ್ತು. ತಾನು ತಾನೇ ಆಗಿರುವ ಜ್ಞಾನದ ಸ್ಥಿತಿಯಲ್ಲಿ ಆ ಇನ್ನೊಂದೂ ಇರಲಿಲ್ಲ, ಕತ್ತಲೆಯನ್ನು ಗುರುತಿಸುವ 'ನಾನು' ಕೂಡ ಇರಲಿಲ್ಲ. ವಾಸ್ತವವೆಂದರೆ ಶುದ್ಧ ಅನಂತ ಅಸ್ತಿತ್ವವೇ ಶುದ್ಧ ಅನಂತ ಜ್ಞಾನವಾಗಿತ್ತು, ಉಳಿದದ್ದು ಶೂನ್ಯವಾಗಿತ್ತು. ಹೀಗೆ ಇದು ಕತ್ತಲೆಗಿಂತಲೂ ಹೆಚ್ಚಾಗಿ ಇರುವಂತಿರುವ ಕತ್ತಲು.